ಮರವೊಂದು ಬೇರು ಸಮೇತ ನೆಲಕ್ಕೆ ವಾಲಬಾರದು. ಆ ದೃಶ್ಯ ಎಂಥವರನ್ನೂ ಒಂದು ಕ್ಷಣ ಆರ್ದ್ರಗೊಳಿಸುತ್ತದೆ. ಯಾರನ್ನೂ ಆಕರ್ಷಿಸದೇ ತನ್ನ ಪಾಡಿಗೆ ತಾನು ನಡೆಯುತ್ತಿದ್ದ ವ್ಯಕ್ತಿ ರಸ್ತೆಯಲ್ಲಿ ದಿಢೀರನೆ ಬಿದ್ದುಬಿಟ್ಟಾಗ ಆ ಸನ್ನಿವೇಶದ ಅಸಹಜತೆಯಲ್ಲೇ ಅವನು ವ್ಯಕ್ತನಾದ ಹಾಗೆ ಮರವೊಂದು ಬಿದ್ದಾಗಲೇ ತನ್ನ ಇರುವ ನೆನಪಿಸುವುದು. ಎಂದೂ ಯಾರೂ ಕಾಣದ ಅವನ ಪಾದದ ರೇಖೆಗಳ ಹಾಗೆ ಬುವಿಯ ರಹಸ್ಯ ಕತ್ತಲಲ್ಲಿ ಇಂಚಿಂಚೇ ಹಬ್ಬುತ್ತಿದ್ದ ಬೇರು ಇದೇ ಮೊದಲ ಬಾರಿಗೆ ಗಾಳಿಯ ಸ್ಪರ್ಶಿಸಿದೆ. ಸದಾಕಾಲ ಆಗಸವನ್ನೇ ನೋಡುತ್ತಿದ್ದ ಅತಿ ಎತ್ತರದ ಎಲೆಯೂ ನೆಲದ ಮಣ್ಣುಣ್ಣುತಿದೆ. ಬೇರು ಸಮೇತ ವಾಲಿದ ಮರ ಅದೇಕೋ ಅರ್ಧ ಉಂಡೆದ್ದ ಎಲೆಯ ನೆನಪಿಸುತ್ತದೆ.

ಈ ವಾರ ಇನ್ನೊಂದು ಸ್ನೋ ಚಂಡಮಾರುತ ನಮ್ಮ ಮನೆಯಿರುವ ಪ್ರಾಂತ್ಯವನ್ನು ಅಪ್ಪಳಿಸುತ್ತದೆ ಎಂಬ ವಾರ್ತೆ ಕೇಳಿದಾಗಲೇ ದಿಗಿಲಾಗಿತ್ತು, ಈ ಬಾರಿ ಏನು ಅವಘಡ ಕಾದಿದೆಯೋ ಅಂತ. ಕಳೆದ ವರ್ಷ ಚಳಿಗಾಲದ ಚಂಡಮಾರುತದಲ್ಲಿ ಒಂದು, ಅದಕ್ಕಿಂತ ಹಿಂದಿನ ವರ್ಷ ಎರಡು ಮರಗಳು ಆಗಲೇ ನೆಲವನಪ್ಪಿದ್ದವು. ಮನೆಯ ಸುತ್ತ ಮರಗಳಿವೆ ಎಂಬ ಕಾರಣಕ್ಕೆ ಖುಷಿಯನ್ನೂ, ಹೆಮ್ಮೆಯನ್ನೂ ಅನುಭವಿಸುತ್ತಿದ್ದ ನಮ್ಮನ್ನು ವೃಕ್ಷಗಳ ಈ ಅಕಾಲ ಮೃತ್ಯು ಘಾಸಿಗೊಳಿಸಿತ್ತು. ನೋಡನೋಡುತ್ತಲೇ ಪೈನ್, ವಾಲ್‌ನಟ್, ಟುಲಿಪ್, ರೆಡ್ ಓಕ್ ಮರಗಳು ಒಂದೊಂದಾಗಿ ಮಣ್ಣಾಗಿ ಹೋಗಿದ್ದವು. ಚಳಿಗಾಲದ ಒಂದು ಮುಂಜಾನೆ ಹದಿನೆಂಟಿಂಚು ಸ್ನೋ ಮಾರುತಕ್ಕೆ ಎದ್ದಾಗ ಹಿತ್ತಿಲಲ್ಲಿ ಗಾಯಗೊಂಡ ಅಪ್ಸರೆಯಂತೆ ನೆಲಕ್ಕೆ ಹಸಿರು ಚೆಲ್ಲಿ ಮಲಗಿರುತ್ತಿದ್ದವು.

ಒಮ್ಮೆಯಂತೂ ಮನೆಯ ಮುಂದಿನ ಸ್ವೀಟ್ ಬರ್ಚ್ ಮರ ರಸ್ತೆಯ ಮೇಲೆ ಉರುಳಿ ಬಿದ್ದು, ನಸುಕಿನಲ್ಲೇ ಕಚೇರಿಗಳಿಗೆ ತೆರಳುವವರ ವಾಹನಗಳ ಹಾರ್ನು ಸದ್ದು ನಮ್ಮನ್ನೆಬ್ಬಿಸಿತ್ತು. ಪೊಲೀಸ್ ಆಫೀಸರನೊಬ್ಬ ಆ ಕೂಡಲೆ ಮರ ತೆರವುಗೊಳಿಸುವವರಿಗೆ ಕರೆ ಮಾಡಿ ವಾಹನ ಸಂಚಾರವನ್ನು ಸಹಜ ಸ್ಥಿತಿಗೆ ಮರಳಿಸಲು ವಿನಂತಿಸಿಕೊಂಡಿದ್ದ. ಕಿಟಕಿಯಿಂದ ಹೊರ ನೋಡಿದರೆ ಬಿದ್ದ ಮರದ ಸುತ್ತ ಎಚ್ಚರಿಕೆ ಎಂದು ಬರೆಸಿಕೊಂಡ ಹಳದಿ ಟೇಪನ್ನು ಕಟ್ಟಿ ನಾಲ್ಕಾರು ಪೊಲೀಸರು ರಸ್ತೆಯ ವಾಹನಗಳಿಗೆ ದಾರಿ ತೋರಿಸುತ್ತಿದ್ದರು. ಯಾವ ಕಾಲದಲ್ಲಿ ಯಾರು ಬೀಜ ನೆಟ್ಟು, ನೀರೆರೆದು ಸಲಹಿದ ವೃಕ್ಷಗಳೋ, ನಮ್ಮ ಕಾಲಕ್ಕೆ ಯಾತ್ರೆ ಮುಗಿಸುತ್ತಿದ್ದವು.

ನ್ಯೂಜರ್ಸಿಯಲ್ಲಿ ವರ್ಷಕ್ಕೆರಡು ಬಾರಿಯಾದರೂ ಸ್ನೋ ಸ್ಟಾರ್ಮ್ ಮುನ್ಸೂಚನೆ ಇದ್ದೇ ಇರುತ್ತದೆ. ಈ ಬಾರಿಯ ಚಂಡಮಾರುತ ನೆಲದಿಂದ ಒಂದು ಫೂಟು ಮೇಲಿನ ತನಕ ಹಿಮವನ್ನು ಗುಡ್ಡೆ ಹಾಕಿತ್ತು. ಹಿತ್ತಿಲಲ್ಲಿ ಗಾಳಿ ನಡುಗಿದಂತೆ ಸದ್ದು ಕೇಳಿದಾಗಲೇ ತಿಳಿದು ಹೋಯಿತು, ಅದು ಈಶಾನ್ಯ ದಿಕ್ಕಿಗಿದ್ದ ಪೈನ್ ಮರದ್ದೇ ಆಕ್ರಂದನವೆಂದು. ಕಿಟಕಿಯಿಂದಲೇ ನೋಡಿ ಖಚಿತಪಡಿಸಿಕೊಂಡು ಎಂದಿನಂತೆ 'ಡಗ್ಲಸ್ ಟ್ರೀ ಸರ್ವಿಸಸ್'ನ ಡಗ್‌ನಿಗೆ ಕರೆ ಮಾಡಿದೆ.

"ಹಾಗೆಲ್ಲ ತಕ್ಷಣ ಬರಲಾಗುವುದಿಲ್ಲ. ಈಗಾಗಲೇ ಎರಡು ಮರಗಳನ್ನೆತ್ತಲು ಕರೆ ಬಂದಿದೆ. ನಿಮ್ಮ ಮನೆ ಇನ್ನೊಂದು ದಿಕ್ಕಿನಲ್ಲಿರುವುದರಿಂದ ನಾಳೆ ಅಥವಾ ನಾಡಿದ್ದು ಬರುವೆ" ಎಂದು ಗುಡುಗಿದ ಡಗ್. ಬಿದ್ದ ಮರದಿಂದ ಯಾರ ಮನೆಗೂ, ರಸ್ತೆಗೂ ಹಾನಿಯಾಗಿಲ್ಲವಾದುದರಿಂದ ನನಗೂ ಅಂಥ ತುರ್ತು ಕಾಣಲಿಲ್ಲ. ಆದಷ್ಟು ಬೇಗ ಬರಲು ತಿಳಿಸಿ ಫೋನಿಟ್ಟೆ.

ಇನ್ನೊಮ್ಮೆ ಕಿಟಕಿಯಿಂದಲೇ ಪೈನ್ ಮರವನ್ನು ನೋಡಿದೆ. ಕಾಂಡವನ್ನೊಮ್ಮೆ ನೇವರಿಸುವ ಮನಸ್ಸಾದರೂ ಜಾಕೆಟ್ಟನ್ನೂ ಶೂಗಳನ್ನೂ ತೊಡಲು ಮನಸ್ಸಿಲ್ಲದೇ ಒಳಗೇ ಉಳಿದೆ. ಎತ್ತರದಲ್ಲಿ ಎಲೆಗಳೂ, ಟೊಂಗೆಗಳೂ ಇರದೇ ಹಿತ್ತಿಲಲ್ಲಿ ಬೆಳಕಿನ ವಿನ್ಯಾಸ ಇಷ್ಟು ದಿನ ಪರಿಚಯವಿರದ ವಿಭಿನ್ನ ಮಾದರಿಯಲ್ಲಿ ಬಿದ್ದಿತ್ತು. ಮರದ ಭಾರಕ್ಕೆ ನೆಲದ ಮೇಲಿನ ಸ್ನೋ ಚೆದುರಿತ್ತು. ಉಳಿದಂತೆ ದೃಷ್ಟಿ